**<u>ಮಧ್ಯಂತರ ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿನಾಂಕ *03.06.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಮಧ್ಯಂತರ ಅರ್ಜಿಯ ಮೇಲೆ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು 9 ನೇ ತರಗತಿ ವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು ಮೊದಲು ಆಟೋ ಚಾಲಕ ಕರ್ತವ್ಯ ಮಾಡುತ್ತಿದ್ದ ನಾನು ಓಡಿಸುತ್ತಿದ್ದ ಆಟೋ ನಂಬರ್ 713 ಇತ್ತು. ನನ್ನ ಬಳಿ ಆಟೋ ಚಾಲನ ಲೈಸೆನ್ಸ್ ಮತ್ತು ಬ್ಯಾಡ್ಜ್ ಇರುತ್ತದೆ. ಸದರಿ ಲೈಸೆನ್ಸ್ ಮತ್ತು ಬ್ಯಾಡ್ಜ್ ನ ಜೆರಾಕ್ಸ್ ಪ್ರತಿಯನ್ನು ಪೊಲೀಸರಿಗೆ ನೀಡಿದ್ದೇನೆ. ನಾನು ಉಪಯೋಗಿಸುತ್ತಿದ್ದ ಮೊಬೈಲ್ ನಂಬರ್ ಸಹ ಪೊಲೀಸರಿಗೆ ನೀಡಿರುತ್ತೇನೆ. ಸದರಿ ನಂಬರ್ 9900458704 ಇರುತ್ತದೆ. ಚಾಸಾ-1 ಗೀತಾ ರವರಿಂದ ಬಂತು ಎಂದು ಹೇಳಾದ ನಂಬರ್ ಅನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ.

ಚಾಸಾ -1 ರವರ ವಾಸಿಸುತ್ತಿದ್ದ ಸ್ಥಳ ಮತ್ತು ನನ್ನ ವಾಸ ಸ್ಥಳ ಕ್ಕೆ ಸುಮಾರು 15 ಕಿ.ಮೀಟರ್ ಅಂತರ ಇರುತ್ತದೆ ಎಂದರೆ ಸರಿ. ಚಾಸಾ-1 ನನಗೆ 4-5 ವರ್ಷಗಳಿಂದ ಪರಿಚಯ. ಚಾಸಾ-1 ನನಗೆ ಆತ್ಮೀಯರು ಎಂದರೆ ಸರಿ. ನಾನು ಯಾವುದೇ ಆಟೋ ಓಡಿಸುತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನನ್ನ ಆಟೋ ಮಾಲಿಕತ್ವದ ದಾಖಲೆಗಳನ್ನು ನೀಡಿರುತ್ತೇನೆ. ನಾನು ಯಾವುದೇ ಆಟೋ ದಾಖಲೆಗಳನ್ನು ನೀಡಿರುವುದಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ನನ್ನ ಬಳಿ ಆಟೋ ಚಾಲನಾ ಪರವಾನಿಗೆ ಮತ್ತು ಬ್ಯಾಡ್ಜ್ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಚಾಸಾ–1 ರವರನ್ನು ಪಂಪ್ ಹೌಸ್ ಹತ್ತಿರ ಇರುವ ಕಾಲುವೆಗೆ ಕರೆದುಕೊಂಡು ಹೋಗಿ ಅಲ್ಲೇ ಇದ್ದು ಅವರು ಬಟ್ಟೆ ಒಗೆದ ನಂತರ ಕರೆದುಕೊಂಡು ವಾಪಸ್ಸು ಬಂದಿರುತ್ತೇನೆ ಅದರ ಬಾಡಿಗೆಗೆ 500/– ರೂಪಾಯಿ ಪಡೆದುಕೊಂಡಿದ್ದೆನು. ಚಾಸಾ–1 ರವರ ಮನೆಯ ಅಕ್ಕಪಕ್ಕ ಅಂಗಡಿಗಳು ಇರುತ್ತವೆ. ಸದರಿ ಅಂಗಡಿಗಳಲ್ಲಿ ಎಲ್ಲಾ ವಸ್ತುಗಳನ್ನು ಮಾರುತ್ತಾರೆ ಹಾಗೆಯೇ ಹಗ್ಗವನ್ನು ಸಹ ಮಾರುತ್ತಾರೆ ಎಂದರೆ ಸರಿ. ನಾನು ಬೆಳಗ್ಗೆ 10.30 ಗಂಟೆಯಲ್ಲಿ ರೈಲ್ವೆ ಸ್ಟೇಷನ್ ನಲ್ಲಿ ಬಾಡಿಗೆಗೆ ಕಾಯುತ್ತಿದ್ದಾಗ ಚಾಸಾ–1 ರವರ ಹಗ್ಗವನ್ನು ತೆಗೆದುಕೊಂಡು ಬರುವಂತೆ ಫೋನ್ ಮಾಡಿ ತಿಳಿಸಿದ್ದು ನಾನು ಸೂರ್ಯ ಬೇಕರಿ ಬಳಿ ಹಗ್ಗವನ್ನು ಕೊಂಡುಕೊಂಡೆ. ರೈಲ್ವೆ ಸ್ಟೇಷನ್ ನಿಂದ ಕುಂಬಾರ ಕೊಪ್ಪಲಿಗೆ ಹೋಗುವಾಗ ಕೆ.ಆರ್.ಎಸ್. ಮುಖ್ಯ ರಸ್ತೆ ಮೂಲಕ ಹೋಗಬೇಕು ಎಂದರೆ ಸರಿ. ಹೋಗುವ ದಾರಿಯಲ್ಲಿ ವೆಂಕಟರಮಣ ಸ್ವಾಮಿ ದೇವಸ್ಥಾನದ ಮುಂದೆ ಹಾದು ಹೋಗಬೇಕು ಎಂದರೆ ಸರಿ. ಸೂರ್ಯ ಬೇಕರಿಗೆ ಹೋಗಬೇಕಾದರೆ ಕುಂಬಾರಕೊಪ್ಪಲು ಊರ ಒಳಗಿಂದ ಹೋಗಿ ಅಲ್ಲಿಂದ ಸುಮಾರು 2 ಕಿ.ಮೀಟರ್ ಮುಂದೆ ಹೋಗಬೇಕು ಎಂದರೆ ಸರಿ. ಗೀತಾ ರವರು ಬೆಳಗ್ಗೆ 10.30 ಗಂಟೆಗೆ ನನಗೆ ಫೋನ್ ಮಾಡಿದ್ದ ವಿವರಗಳನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಗೀತಾ ರವರು ನನಗೆ ಫೋನ್ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೇಯೇ ನಾನು ಹಗ್ಗವನ್ನು ಕೊಂಡುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು 10.40 ಗಂಟೆಗೆ ಹಗ್ಗದ ಸಮೇತ ಚಾಸಾ–1 ರವರ ಮನೆಯಲ್ಲಿ ಇದ್ದೆ. ನನ್ನ ಸ್ವಂತ ಆಟೋದಲ್ಲಿಯೇ ಗೀತಾ ರವರ ಮನೆಗೆ ಹೋಗಿದ್ದೆ

ಮತ್ತು ಅವರ ಮನೆಯ ಮುಂದೆಯೇ ಆಟೋ ನಿಲ್ಲಿಸಿದ್ದೆ. ನನಗೆ 12.00 ಗಂಟೆಗೆ ರೈಲ್ವೆ ಸ್ಟೇಷನ್ ಗೆ ಬಾಡಿಗೆ ಬಂದಿದ್ದು ನಾನು ರೈಲ್ವೆ ಸ್ಟೇಷನ್ ಗೆ ಹೋಗಿರುತ್ತೇನೆ. ಚಾಸಾ–1 ರವರ ಮನೆಯಲ್ಲಿ ಅವರ ಮಗಳು ಟೀ ಕೊಟ್ಟರು ಅದನ್ನು ಕುಡಿದು ನಾನು ರೈಲ್ವೆ ಸ್ಟೇಷನ್ ಗೆ ಬಾಡಿಗೆಗೆ ಹೋಗಿರುತ್ತೇನೆ. ನಾನು ಚಾಸಾ–1 ರವರ ಮನೆಗೆ ಹೋಗಿರಲಿಲ್ಲ, ಯಾವುದೇ ಕಿರುಚಿಕೊಳ್ಳುವ ಶಬ್ದವನ್ನು ಕೇಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ–1 ರವರ ಮಗಳಿಗೆ ಆರೋಪಿ ಚುಚ್ಚಿದ್ದನ್ನು ಮತ್ತು ಚಾಸಾ–1 ಅಡ್ಡ ಬಂದು ಚಾಕು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಟೋ ಸ್ಟಾಂಡ್ಗೆ ಹೋಗಿ ಬೇರೆ ಆಟೋವನ್ನು ಕರೆದುಕೊಂಡು ಬಂದು ಹರ್ಷಿತ ಮತ್ತು ಚಾಸಾ–1 ರವರನ್ನು ಆಸ್ಪತ್ರೆಗೆ ಕಳುಹಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹರ್ಷಿತಾಳನ್ನು ಎತ್ತಿ ಆಟೋದಲ್ಲಿ ಮಲಗಿಸುವ ಯಾವುದೇ ಪ್ರಯತ್ನ ಮಾಡಿರಲಿಲ್ಲ. ಹರ್ಷಿತ ಮರಣ ಹೊಂದಿದ ವಿಷಯ ನನಗೆ ಸಂಜೆ 4.00 ಗಂಟೆಗೆ ಗೊತ್ತಾಗಿತ್ತು. ನಾನು ಘಟನಾ ಸ್ಥಳ ದಲ್ಲಿ ಇರಲಿಲ್ಲ ಚಾಸಾ–1 ನನಗೆ ಆತ್ಮೀಯರು ಇರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹರ್ಷಿತಳ ಗಂಡ ಹರ್ಷಿತಳನ್ನು ತನ್ನೊಂದಿಗೆ ಬಾ ಎಂದು ಕರೆದಾಗ ಹರ್ಷಿತ ನಿಮ್ಮ ತಂದೆ ತಾಯಿಯನ್ನು ಕರೆದುಕೊಂಡು ಬಾ ಎಂದು ಹೇಳಿದ್ದಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–1 ರಂತಹ ಚಾಕುಗಳು ಎಲ್ಲರ ಮನೆಯಲ್ಲೂ ಸಾಮಾನ್ಯವಾಗಿ ಇರುತ್ತದೆ ಎಂದರೆ ಸರಿ. ನಾನು ಚಾಕು ನೋಡಿದ್ದೆ ಎಂದು ಸುಳ್ಳು

ಹೇಳುತಿತದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆ ನಾನು ಚಾಸಾ–1 ರವರು ಹೇಳಿಕೊಟ್ಟಂತೆ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**